JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಮಾಯಕೊಂಡ ಕದನ: ಕದನಸಿಂಹನ ಕಥನ (ಕ್ರಿ.ಶ. 24-03-1748 ರಿಂದ 18-02-1749.)

**ರೇವಣಸಿದ್ದಪ್ಪ. ಎಸ್.**
ಸಹಾಯಕ ಪ್ರಾಧ್ಯಾಪಕರು
ಹಾಗೂ ಸಂಶೋಧನಾರ್ಥಿ
ಇತಿಹಾಸ ವಿಭಾಗ
ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ.

‘ಕದನಸಿಂಹ ಹಿರೇಮದಕರಿನಾಯಕ’
(ಹಿರೇಮದಕರಿನಾಯಕರು ಹರಪನಹಳ್ಳಿ ಸೋಮಶೇಖರನಾಯಕರಿಗೆ ಹೇಳುತ್ತಿರುವುದು)
ಸಂಪಿಗೆ ಸಿದ್ದೇಶನ ವರಪುತ್ರನಾದ ನನ್ನ
ಮೇಲೆ ನಿನ್ನ ಪೌರುಷ ಪ್ರದರ್ಶನವೇ?
ಇಗೋ ಇಲ್ಲಿ, ದಿಟ್ಟಿಸಿ ನೋಡು! ನನ್ನಪ್ಪನ
ಬಿಚ್ಚುಗತ್ತಿಯ ರಕ್ತದಾಹ ಇನ್ನೂ ಹಿಂಗಿಲ್ಲ
ಹಸಿದ ಹಸಿ ಅಂಚಿನ ಬಿಸಿರಕ್ತ ತೊಟ್ಟಿಕ್ಕುತ್ತಿದೆ
ರುಂಡ ಮುಂಡಗಳ ಚಂಡಾಡಿ ಚಿಮ್ಮಿದ
ಬಿಸಿರಕ್ತದಲ್ಲಿ ಮಿಂದೆದ್ದು ಅಭಿಷೇಕಗೊಂಡಿದೆ
ಮುಚ್ಚಿಡು ತುಕ್ಕಿಡಿದು ಮೋತಿ ಮೊಂಡಾದ
ಈಟಿ ಭರ್ಜಿಗಳ ಖಡ್ಗ ಗುರಾಣಿಗಳ
ನನ್ನೆದುರು ಬಂದ ನಿನ್ನೆದೆಗೆ ನೀನೇ ನಿನ್ನ
ಕಿವಿಗೊಟ್ಟು ಕೇಳು ಬಿಸಿರಕ್ತ ಹೆಪ್ಪುಗಟ್ಟಿ
ನಿನ್ನ ಗುಂಡಿಗೆ ಬಿಸಿಯಾರಿ ತಣ್ಣಗಾಗಿದೆ
ಈ ಹೆದರು ಪುಕ್ಕಲು ವಂಚಕರ ಮುಂದಾಳು!
ಈ ಕದನ ಸಿಂಹನ ಕೆಣಕುವ ಉದ್ಧಟತನವೇ?
ಪಾಪ! ಅರಸ ಆನೆಯೇರಿ ಬಂದಿರುವೆ
ಹೊರಡು, ಮದಕರಿ ಕೆಣಕುವ ಹುಚ್ಚುತನ ಬೇಡ.

- ರೇವಣಸಿದ್ದಪ್ಪ. ಎಸ್.

ಹಿರೇಮದಕರಿನಾಯಕನ ಚರಿತ್ರೆಯಲ್ಲಿ ಹೆಸರುವಾಸಿಯಾದ ಮಾಯಕೊಂಡ ಕೋಟೆ ಅತ್ಯಂತ ಆಯಕಟ್ಟಿನ ಕೋಟೆಯಾಗಿತ್ತು. ಚಿತ್ರದುರ್ಗ ಸಂಸ್ಥಾನದ ಯುದ್ಧ ಚರಿತ್ರೆಯಲ್ಲಿ ಅತ್ಯಂತ ಮಹತ್ವದ್ದೆನಿಕೊಂಡಿರುವ ಮಾಯಕೊಂಡ ಕದನ ಒಟ್ಟು ಹತ್ತು ತಿಂಗಳು ಇಪ್ಪತ್ತೊಂದು ದಿನಗಳ ಕಾಲ ನಡೆದಿತ್ತು. ‘ರಾಯಚೂರು’ ತಾಳಿಕೋಟೆ ಕದನಕ್ಕೆ ಕಾರಣವಾಗಿ ಕ್ರಿ.ಶ. 1565ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣವಾಗಿದ್ದಂತೆ

'ಉಚ್ಚಂಗಿದುರ್ಗ'ಮಾಯಕೊಂಡ ಕದನಕ್ಕೆ ಕಾರಣವಾಗಿ ಕ್ರಿ.ಶ. 1749ರಲ್ಲಿ ಹಿರೇಮದಕರಿನಾಯಕನ ಪತನಕ್ಕೆ ಕಾರಣವಾಗಿ, ಚಿತ್ರದುರ್ಗ ಪಾಳೆಯಗಾರರ ಸಂಸ್ಥಾನ ಅವನತಿಯ ದಾರಿ ಹಿಡಿಯಲೂ ಕಾರಣವಾಗಿತ್ತು. ತಾಳಿಕೋಟೆ ಕದನ ವಿಜಯನಗರ ಹಾಗೂ ಬಹುಮನಿ ಸುಲ್ತಾನರ ಅಳಿವು - ಉಳಿವನ್ನು ನಿರ್ಧರಿಸಿದ್ದಂತೆ ಮಾಯಕೊಂಡ ಕದನ ಚಿತ್ರದುರ್ಗ ಹಾಗೂ ಹರಪನಹಳ್ಳಿ ಪಾಳೆಯಗಾರರ ಅಳಿವು - ಉಳಿವನ್ನು ನಿರ್ಧರಿಸಿತ್ತು.

ಮೊದಲನೇ ಕಸ್ತೂರಿರಂಗಪ್ಪನಾಯಕ ಕ್ರಿ.ಶ. 1652ರಲ್ಲಿ ಬಸವಾಪಟ್ಟಣ್ಣದ ಪಾಳೆಯಗಾರರೊಂದಿಗೆ ಹೋರಾಡಿ ಮಾಯಕೊಂಡ ಸೇರಿದಂತೆ ಸಂತೆಬೆನ್ನೂರು, ಹೊಳಲ್ಕೆರೆ, ಅಣಜಿ, ಜಗಳೂರು ಮತ್ತಿತರ ಪ್ರದೇಶಗಳನ್ನು ಗೆದ್ದು ಚಿತ್ರದುರ್ಗಕ್ಕೆ ಸೇರಿಸಿಕೊಂಡಿದ್ದನು. ಚಿತ್ರದುರ್ಗ ಸಂಸ್ಥಾನದ ಆಯಕಟ್ಟಿನ ಪ್ರದೇಶವಾಗಿದ್ದ ಮಾಯಕೊಂಡಕ್ಕಾಗಿ ನಡೆದ ಕದನ ಬಿದನೂರಿ (ಕೆಳದಿ)ನವರಿಂದ ಪ್ರೇರೇಪಿತರಾಗಿದ್ದ ಹರಪನಹಳ್ಳಿ ಪಾಳೆಯಗಾರರು ಮತ್ತು ಚಿತ್ರದುರ್ಗದವರ ನಡುವಿನ ಹೋರಾಟವಾಗಿತ್ತು. ಅಣಜಿ, ಆಲೂರು, ಬೇತೂರು, ಉಚ್ಚಂಗಿದುರ್ಗ, ಮಾಯಕೊಂಡ, ತೂಲಹಳ್ಳಿ, ಬಾತಿ ಇವು ಇವರಿಬ್ಬರ ನಡುವಿನ ಹಲವು ಹೋರಾಟಗಳಿಗೆ ಯುದ್ಧಭೂಮಿಗಳಾಗಿದ್ದವು. ಹಿರೇಮದಕರಿನಾಯಕನ ಕಾಲದಲ್ಲಿ ನಡೆದ ಮಾಯಕೊಂಡ ಕದನಕ್ಕೆ ರಾಜಕೀಯ ಮತ್ತು ಧಾರ್ಮಿಕ ಕಾರಣಗಳು ಪ್ರಧಾನವಾಗಿ, ಆರ್ಥಿಕ ಕಾರಣಗಳು ಗೌಣವಾಗಿ ಕಾಣುತ್ತವೆ.

ಚಿತ್ರದುರ್ಗ ಪಾಳೆಯಗಾರರು ಶತ್ರುಗಳಿಂದ ಸುತ್ತುವರೆಯಲ್ಪಟ್ಟಿದ್ದರು. ಜೊತೆಗೆ ಸಂಸ್ಥಾನದೊಳಗಿನ ಒಳಸಂಚು ಮತ್ತು ಸೈನ್ಯಾಧಿಕಾರಿಗಳ ಹಸ್ತಕ್ಷೇಪಗಳೂ ಇದ್ದವು. ಭರಮಣ್ಣನಾಯಕನ ಕಾಲದಿಂದ ಕತ್ತಿ ಮಸೆಯಲಾರಂಬಿಸಿದ್ದ ಸಂಸ್ಥಾನದ ಶತ್ರುಗಳು ಮಾಯಕೊಂಡದಲ್ಲಿ ಒಟ್ಟುಗೂಡಿದ್ದರು. ಇವರನ್ನೆಲ್ಲಾ ಎದುರಿಸುವ ಜವಬ್ದಾರಿ ಹಿರೇಮದಕರಿನಾಯಕನಿಗಿತ್ತು. ಇದು ಭರಮಣ್ಣನಾಯಕ ತನ್ನ ಯುದ್ಧಗಳ ಪರಿಣಾಮ ನೆಟ್ಟಿದ್ದ ಪ್ರತಿಕಾರದ ಬೀಜಗಳ ಫಲ. ಹರಪನಹಳ್ಳಿಯವರ ಹಗೆತನದ ಫಲವಾದ ಮಾಯಕೊಂಡ ಕದನಕ್ಕೆ ಪೂರ್ಣವಿರಾಮವನ್ನಿಟ್ಟವನು ಇವನ ಮಗ, ಇವನಷ್ಟೇ ಸಮರ್ಥನಾಗಿದ್ದ ಇಮ್ಮಡಿ ಕಸ್ತೂರಿ ರಂಗಪ್ಪನಾಯಕ. ಮಾಯಕೊಂಡ ಕದನ ಬ್ರಿಟೀಷರು, ಹೈದರಬಾದಿನ ನಿಜಾಮ ಹಾಗೂ ಮರಾಠರು ಸೇರಿ ಹೈದರ್ ಮತ್ತು ಟಿಪ್ಪುಸುಲ್ತಾನರ ವಿರುದ್ಧ ನಡೆಸಿದ್ದ ಎರಡನೇ ಆಂಗ್ಲೋ-ಮೈಸೂರು ಯುದ್ಧವನ್ನು ನೆನಪಿಸುತ್ತದೆ ಏಕೆಂದರೆ ಆ ಯುದ್ಧದಂತೆಯೇ ಮಾಯಕೊಂಡ ಕದನದಲ್ಲಿ ಬಿದನೂರು ಇಮ್ಮಡಿ ಬಸವಪ್ಪನಾಯಕ, ಹರಪನಹಳ್ಳಿ ಸೋಮಶೇಖರನಾಯಕ ಹಾಗೂ ರಾಯದುರ್ಗ ಮತ್ತು ಸವಣೂರಿನ ಪಾಳೆಯಗಾರರು ಹಿರೇಮದಕರಿನಾಯಕ ಮತ್ತು ಇಮ್ಮಡಿ ಕಸ್ತೂರಿರಂಗಪ್ಪನಾಯಕರ ವಿರುದ್ಧ ಒಟ್ಟುಗೂಡಿದ್ದರು. ಅಲ್ಲಿ ಯುದ್ಧ ನಡೆಯುತ್ತಿರುವಾಗಲೇ ಹೈದರಾಲಿ ಮಡಿದು; ಯುದ್ಧವನ್ನು ಟಿಪ್ಪುಸುಲ್ತಾನ್ ಮುಂದುವರೆಸಿ ಗೆದ್ದಿದ್ದನು. ಇಲ್ಲಿ ಹಿರೇಮದಕರಿನಾಯಕ ಯುದ್ಧನಡೆಯುತ್ತಿರುವಾಗಲೇ ಮಡಿದರೆ; ಯುದ್ಧವನ್ನು ಇಮ್ಮಡಿ ಕಸ್ತೂರಿರಂಗಪ್ಪನಾಯಕ ಮುಂದುವರೆಸಿ ಗೆದ್ದಿದ್ದನು.

ಮಾಯಕೊಂಡ ಕದನಕ್ಕೆ ಸಾಂಪ್ರದಾಯಿಕ ಹಗೆತನದ ಕಾರಣವೊಂದು ರಾಜಕೀಯ ಕಾರಣವಾಗಿ ಕಂಡುಬಂದಿದೆ. ಹರಪನಹಳ್ಳಿ ಪಾಳೆಯಗಾರರು ಮತ್ತು ಚಿತ್ರದುರ್ಗ ಪಾಳೆಯಗಾರರ ನಡುವಿನ ವೈವಾಹಿಕ ಬಳುವಳಿಯ ರೂಪವಾಗಿದ್ದ 'ಉಚ್ಚಂಗಿದುರ್ಗ' ಪ್ರದೇಶ ಅವರಿಬ್ಬರ ನಡುವಿನ ಯುದ್ಧಭೂಮಿಯಾಗಿ ಮಾರ್ಪಟ್ಟಿದ್ದು ದುರಂತವೆ ಸರಿ. ಕ್ರಿ.ಶ. 1572ರಲ್ಲಿ ದುರ್ಗದ ತಿಮ್ಮಣ್ಣನಾಯಕ ತನ್ನ ಮಗಳು ಹೊನ್ನವ್ವನಾಗತಿಯನ್ನು ಹರಪನಹಳ್ಳಿಯ ದಾದೇನಾಯಕನಿಗೆ ವಿವಾಹ ಮಾಡಿಕೊಟ್ಟು ಉಚ್ಚಂಗಿದುರ್ಗವನ್ನು ಬಳುವಳಿಯಾಗಿ ನೀಡಿದ್ದನು. ಈ ಪ್ರದೇಶಕ್ಕೆ ಓಬಣ್ಣನಾಯಕನ ಕಾಲದಲ್ಲಿ ದೇವಿಯ ಆರಾಧನೆಗೆ ದಾದೇನಾಯಕ ಅವಕಾಶ ಮಾಡಿಕೊಡದೇ ಇದ್ದಿದ್ದರಿಂದ ಮನಸ್ತಾಪ ಉಂಟಾಗಿತ್ತು. ಹೊನ್ನವ್ವನಾಗತಿ ದುರ್ಗದವರ ಪರವಾಗಿ ಪಿತೂರಿ ಮಾಡುತ್ತಿದ್ದಳೆಂದು ತಿಳಿದು ದಾದೇನಾಯಕ ಅವಳನ್ನು ಉಚ್ಚಂಗಿದುರ್ಗದ ಮೇಲಿಂದ ತಳ್ಳಿ ಸಾಯಿಸಿದ್ದನು (ಕೆಲವರು ಕಾಲುಜಾರಿ ಬಿದ್ದಳೆಂದು ಅಭಿಪ್ರಾಯಿಸುತ್ತಾರೆ). ಕ್ರಿ.ಶ. 1665ರಲ್ಲಿ ಈ ಸೇಡಿನ ಪ್ರತಿಕಾರವಾಗಿ ಅಣಜಿ ಕದನದಲ್ಲಿ ಹರಪನಹಳ್ಳಿಯವರನ್ನು ಸೋಲಿಸಿ ಉಚ್ಚಂಗಿದೇವಿಯ ಉತ್ಸವಮೂರ್ತಿಯನ್ನು ತಂದು ಚಿತ್ರದುರ್ಗದಲ್ಲಿ ಪ್ರತಿಷ್ಠಾಪಿಸಿದ್ದನು.

ಹಿರೇಮದಕರಿನಾಯಕನ ಕಾಲದಲ್ಲಿ ಸೈನಿಕರು ಹರಪನಹಳ್ಳಿಯವರ ಮೇಲೆ ವಿಜಯದಶಮಿಯಂದು ದಾಳಿಮಾಡಿ ಪಂಚಲೋಹದ ಉಚ್ಚಂಗಿಮೂರ್ತಿಯನ್ನೂ ತಂದರು, ಈ ಆಕ್ರಮಣದಲ್ಲಿ ಹಿರೇಮದಕರಿನಾಯಕನ ಪರಮಾಪ್ತರಲ್ಲಿ ಒಬ್ಬನಾಗಿದ್ದ ತುಂಬರ ಗುದ್ದಿನ ಶಾನಭೋಗರ ಭೀಮಪ್ಪ ಪ್ರಮುಖ ಪಾತ್ರವಹಿಸಿದ್ದನು. ಈ ಆಕ್ರಮಣದ ಯಶಸ್ಸಿನ ಕಾರಣ ಶಾನುಬೋಗರ ಭೀಮಪ್ಪನಿಗೆ ಏಳು ಗ್ರಾಮಗಳನ್ನು ಜಹಗೀರಾಗಿ ನೀಡಲಾಗಿತ್ತು. ಪರಿಣಾಮ ಸೋಮಶೇಕರನಾಯಕ ಹಿರೇಮದಕರಿನಾಯಕನನ್ನು ವಿರೋಧಿಸಲು ಕಾರಣವಾಗಿ ಮಾಯಕೊಂಡದಲ್ಲಿ ಎದುರಾಗಿ ನಿಂತಿದ್ದನು.

ಕ್ರಿ.ಶ. 1741ರಲ್ಲಿ ಹಿರೇಮದಕರಿನಾಯಕನ ವಿರುದ್ಧ ರಾಮಗಿರಿಕದನದಲ್ಲಿ ಸೋತು ಕೆಲವು ಫಿರಂಗಿಗಳನ್ನು ಕಳೆದುಕೊಂಡಿದ್ದ ಕೆಳದಿ ಇಮ್ಮಡಿ ಬಸವಪ್ಪನಾಯಕನ ನೇತೃತ್ವದಲ್ಲಿ ರಾಯದುರ್ಗದ ಕೊನೇಟಿನಾಯಕ, ಹರಪನಹಳ್ಳಿ ಪಾಳೆಗಾರ ಸೋಮಶೇಖರನಾಯಕ ಮತ್ತು ಸವಣೂರಿನ ನವಾಬ ಅಬ್ದುಲ್ ಮಜೀದ್‌ಖಾನ್‌ರು ಸೇರಿಕೊಂಡು ಎರಡನೇ ಆಕ್ರಮಣಕ್ಕೆ ಮುಂದಾಗಿದ್ದರ ಪರಿಣಾಮವೇ ಕ್ರಿ.ಶ. 1748ರ ಮಾಯಕೊಂಡ ಕದನ.

ಆರ್ಥಿಕವಾಗಿ ಪ್ರಬಲವಾಗಿದ್ದ ಬಿದನೂರು, ಸೈನಿಕವಾಗಿ ಬಲಿಷ್ಠವಾಗಿದ್ದ ಚಿತ್ರದುರ್ಗವನ್ನು ಎದುರಿಸುವುದು ಸಧ್ಯದಮಟ್ಟಿಗೆ ಅತೀ ಜರೂರು ಎಂದು ತಿಳಿದಿದ್ದ ಇಮ್ಮಡಿ ಬಸವಪ್ಪನಾಯಕ ಚಿತ್ರದುರ್ಗದ ಶತ್ರುಗಳನ್ನು ಮುಂದಿಟ್ಟುಕೊಂಡು ಪದೇ ಪದೇ ಆಕ್ರಮಣ ಮಾಡುತ್ತಿದ್ದನು ಅದರ ಒಂದು ಭಾಗವೇ ಮಾಯಕೊಂಡ ಕದನ.

ಮಾಯಕೊಂಡ ಕದನ ಧಾರ್ಮಿಕ ಕಾರಣಗಳಿಂದೇನು ಹೊರತಾಗಿಲ್ಲ. ಆಡಳಿತ ನಡೆಸುವವನು ಮತೀಯ ಹಾಗೂ ಸಾಂಸಾರಿಕ ವಿಷಯಕ್ಕೆ ಕೈ ಹಾಕಿದರೆ ಏನಾಗುತ್ತದೆ ಎಂಬುದಕ್ಕೆ ಒಂದು ಸ್ಪಷ್ಟ ಪಾಠ ಈ ಮಾಯಕೊಂಡ ಕದನ. ಆಳುವವ ಆಳ್ವಿಕೆಯ ವಿಧಾನ ಮತ್ತು ಆಳಲ್ಪಡುವವರ ಶೀಲ, ಸ್ವಭಾವ ಮತ್ತು ಸಂಪ್ರದಾಯಗಳನ್ನು ಗಮನಿಸಿ ಗೌರವಿಸಬೇಕು. ಆಡಳಿತ ನಡೆಸುವವರು ತಮ್ಮ ಮತೀಯ ಹಾಗೂ ಸಾಂಸಾರಿಕ ವಿಷಯಗಳಿಗೆ ಕೈ ಹಾಕದಿದ್ದರೆ ಸಾಕು ಎಂಬುದಷ್ಟೆ ಜನರಿಗೆ ಮುಖ್ಯವಾಗಿರುತ್ತದೆ. ಏಕೆಂದರೆ, ಧರ್ಮ ಮತ್ತು ರಾಜಕೀಯ ಒಂದು ವ್ಯವಸ್ಥಿತ ಆಡಳಿತದ ಪ್ರಮುಖ ಆಧಾರ ಸ್ತಂಭಗಳಾಗಿರುತ್ತವೆ.

ಭರಮಣ್ಣನಾಯಕನ ಮರಣದ ನಂತರ ಅಧಿಕಾರಕ್ಕೆ ಬಂದ ಚಿತ್ರದುರ್ಗದ ಅರಸರಲ್ಲಿ ಗುರುಮನೆ ಮುರುಘಾಮಠದ ಬಗೆಗೆ ಇದ್ದ ಧಾರ್ಮಿಕ ನಿಲುವು ಬದಲಾಗಿತ್ತು. ಇದಕ್ಕೆ ರಾಜಕೀಯ ಹಿನ್ನೆಲೆಯ ಕಾರಣ ಇದ್ದಿತು. ಹಿರೇಮದಕರಿನಾಯಕನು ಈ ಧೋರಣೆಗೆ ಒಳಗಾಗಿರಬಹುದು. ಹಿರೇಮದಕರಿನಾಯಕನ ಆಳ್ವಿಕೆಯ ಅವಧಿಯಲ್ಲಿ 'ಮಠಾಂತರ ನೀತಿ'ಯನ್ನು ಅನುಸರಿಸಿ ಶೃಂಗೇರಿ ಮಠಕ್ಕೆ ತನ್ನ ನಿಷ್ಠೆಯನ್ನು ಪ್ರದರ್ಶಿಸಿದ್ದನು. ಸುಮಾರು ಕ್ರಿ.ಶ. 1746-47ರ ಸುಮಾರಿನಲ್ಲಿ ನಡೆದಿರಬಹುದಾದ ಕೋಗುಂಡೆ ಗ್ರಾಮದಲ್ಲಿನ 'ವೇಶ್ಯೆ ಪ್ರಕರಣ'ವೂ ಒಂದು ಕಾರಣವಾಗಿತ್ತು. ಈ ಪ್ರಕರಣದಲ್ಲಿ ಗ್ರಾಮದ ಯುವಕರ ಪರವಾಗಿದ್ದ ನಾಯಕನು ಮುರುಘಾಮಠದ ಹನ್ನೆರಡನೇ ಪೀಠಾಧ್ಯಕ್ಷರಾಗಿದ್ದ ಗುರುಪಾದ ದೇಶಿಕರು ಗ್ರಾಮದ ಹಿರಿಯರನ್ನು ಬೆಂಬಲಿಸಿ ಯುವಕರನ್ನು ಗ್ರಾಮ ಭಹಿಷ್ಕಾರ ಹಾಕಿದ್ದನ್ನು ವಿರೋಧಿಸಿದ್ದನು. ಈ ಪ್ರಕರಣ ಅರಮನೆ-ಗುರುಮನೆಗಳ ನಡುವಿನ ಸಮನ್ವಯತೆಯ ವಾತಾವರಣ ಕೆಡಲು ಕಾರಣವಾಗಿ ಅದೂವರೆಗೂ ಸ್ವೀಕರಿಸಿದ್ದ ಧರ್ಮ ಹಾಗೂ ನಡೆಯಿಸಿದ್ದ ಧಾರ್ಮಿಕ ಜೀವನದ ಬದಲಾವಣೆಗಾಗಿ ಹಿರೇಮದಕರಿನಾಯಕನ ಮಠಾಂತರ ನೀತಿಗೆ ಕಾರಣವಾಗಿತ್ತು. ಈ ಘಟನೆ ಸಂಸ್ಥಾನದ ಚರಿತ್ರೆಯಲ್ಲಿ 'ಕೋಗುಂಡೆ ಕ್ರಾಂತಿ' ಎಂದು ಕರೆಯಬಹುದಾದಷ್ಟು ಸಾಧ್ಯತೆ ಹೊಂದಿದೆ. ಈ ಘಟನೆ ಮಠ ಮತ್ತು ಚಕ್ರವರ್ತಿಯ ನಡುವಣ ಇದ್ದ ಪ್ರಾಚೀನ ಸಂಬಂಧಗಳನ್ನು ಅನಾವರಣಗೊಳಿಸಿತ್ತು. ಕೋಗುಂಡೆ ಘಟನೆಯ ತರುವಾಯ ಶೃಂಗೇರಿ ಮಠ ಪುನಃ ಹಿರೇಮದಕರಿನಾಯಕನ ಮೂಲಕ ಸಂಸ್ಥಾನದ ಉದಾರ ಪ್ರೋತ್ಸಾಹವನ್ನು ಪಡೆಯುವಂಥ ಸ್ಥಾನವನ್ನು ಪ್ರಭಾವವನ್ನು ಹೊಂದಿತು. ಹಿರೇಮದಕರಿನಾಯಕ ಮಠಪತಿ ವಿರುದ್ಧ ನಡೆದುಕೊಂಡ ನಡೆ ಬಹುಶಃ ಸಮಾಜದ ಒಂದು ಸಮುದಾಯದ ಉದ್ದೇಶ ಮತ್ತು ಕ್ರಮಬದ್ಧವಾದ ಪ್ರಚಾರ ಕಾರ್ಯಗಳಿಗೆ ಅವನನ್ನು ವಿರುದ್ಧವಾಗಿ ನಿಲ್ಲಿಸಿತ್ತು. ಯಾವುದೇ ಒಬ್ಬ ರಾಜ ತನ್ನ ಸಮಕಾಲೀನ ಪ್ರಬಲ ಸಮುದಾಯವೊಂದರ ಬೆಂಬಲವಿಲ್ಲದೆ ತನ್ನ ಆಡಳಿತವನ್ನು ನಡೆಸಲು ಸಾಧ್ಯವಿಲ್ಲ. ಇವನ ವಿರುದ್ಧ ನಿಂತುಕೊಂಡ ಸಮುದಾಯವೊಂದರ ಬೆಂಬಲಿತ ಪಾಳೆಯಗಾರರು ಮಲೆನಾಡಿನ ಕೆಳದಿಯ ನಾಯಕತ್ವದಲ್ಲಿ ಸಂಘಟಿತರಾಗಿ ಹೋರಾಟಕ್ಕಿಳಿದ ಸಾಧ್ಯತೆಯನ್ನು ಇಲ್ಲಾ ಎನ್ನುವಂತಿಲ್ಲ.

ಹಿರೇಮದಕರಿನಾಯಕನು ಹೊರಡಿಸಿರುವ ಕೆಲವು ಶಾಸನಗಳನ್ನು ಅವಲೋಕಿಸಿದರೆ ಅವನ ಮಠಾಂತರ ನೀತಿ ಹಾಗೂ ಶೃಂಗೇರಿ ಮಠದೊಂದಿಗಿನ ಸಂಬಂಧ ಮತ್ತಷ್ಟು ಸ್ಪಷ್ಟವಾಗುತ್ತದೆ. ಶೃಂಗೇರಿ ಮಠದೊಂದಿಗಿನ ಸಂಬಂಧ ಹಿರೇಮದಕರಿನಾಯಕನಿಗೆ ತನ್ನ ಸಂಸ್ಥಾನದ ರಕ್ಷಣೆಗಾಗಿ ಅವಶ್ಯವಿದ್ದ ಜನಜಾಗೃತಿ, ಅನುಕೂಲ ಸನ್ನಿವೇಶ ಮತ್ತು ಪರಿಸರ ನಿರ್ಮಾಣಗೊಂಡವೆಂದು ಹೇಳಲು ಸಾಧ್ಯವಾಗದು ಏಕೆಂದರೆ ಯಾವುದೇ ರಾಜನ ರಾಜ್ಯದ ಅಳಿವು-ಉಳಿವು ಅವನ ಆಡಳಿತ ಪ್ರದೇಶದ ಪ್ರಜಾಶಕ್ತಿಯನ್ನು ಅವಲಂಬಿಸಿರುತ್ತದೆ; ಆ ಪ್ರಜಾಶಕ್ತಿಯ ಸಂಘಟನೆಗೆ ಧರ್ಮ ಪ್ರಧಾನ ಪಾತ್ರ ನಿರ್ವಹಿಸುತ್ತದೆ. ರಾಜನೊಬ್ಬ ಧರ್ಮಗುರುಗಳಿಗೆ, ದೇವಾಲಯಗಳಿಗೆ ಹಾಗೂ ಅಗ್ರಹಾರಗಳಿಗೆ ದಾನಗಳನ್ನು ನೀಡಿ ಸರ್ವಮಾನ್ಯ ನೀಡುತ್ತಿದ್ದುದರ ಹಿಂದೆ ಸಮಾಜದ ಎಲ್ಲಾ ವರ್ಗಗಳವರಿಂದ ವಿಶ್ವಾಸ, ಸಹಾನುಭೂತಿ, ಸಹಕಾರಗಳನ್ನು ಪಡೆಯುವ ಉದ್ದೇಶವನ್ನು ಹೊಂದಿರುತ್ತಿದ್ದನು. ತಾನು ದಾನ ನೀಡಿದ ಧರ್ಮಬೆಂಬಲಿತ ಸಮುದಾಯವೊಂದರ ಬೆಂಬಲ ಪಡೆಯುವುದು ರಾಜನ ಉದ್ದೇಶವಾಗಿದ್ದರೆ; ತಾನು ದಾನ ಪಡೆದ ಧರ್ಮನಿಷ್ಠ ರಾಜನಿಗೆ ಬೆಂಬಲ ನೀಡುವುದು ಸಮುದಾಯದ ಉದ್ದೇಶವಾಗಿರುತ್ತಿತ್ತು. ಇದೊಂದು ರೀತಿ "ಧರ್ಮೋ ರಕ್ಷತೀ ರಕ್ಷಿತಃ" ಎಂಬಂತೆ ರಾಜ ನಿಷ್ಠೆ ಧರ್ಮಕ್ಕಿದ್ದರೆ ಧರ್ಮ ನಿಷ್ಠೆ ರಾಜನಿಗೆ ಎಂಬ ಪರಸ್ಪರ ನಿರ್ಧಾರವನ್ನು ಅವಲಂಬಿಸಿತ್ತು. ಹಿರೇಮದಕರಿನಾಯಕನು ತನ್ನ ಆಡಳಿತಾವಧಿಯಲ್ಲಿ ನೀಡಿರುವ ದಾನಶಾಸನಗಳ ಹಿನ್ನೆಲೆಯಲ್ಲಿ ಅವನು ಕೈಗೊಂಡ ಧಾರ್ಮಿಕ ಪಲ್ಲಟದ ಪರಿಣಾಮಗಳನ್ನು ಗ್ರಹಿಸಲು ಸಾಧ್ಯವಿದೆ. ಕ್ರಿ.ಶ. 1726 ಫೆಬ್ರವರಿ 20ರ ಬುಧವಾರದಂದು ಹೊರಡಿಸಲಾಗಿರುವ ಶಾಸನ ನಾಕಿಕೆರೆ ಗ್ರಾಮವನ್ನು ತಿರುಮಲೆ ಪೆನುಗೊಂಡ ರಾಮಾಚಾರ್ಯರ ಮಗ ಶ್ರೀನಿವಾಸಚಾರ್ಯರಿಗೆ ದಾನಕೊಟ್ಟಿದ್ದನ್ನು ದಾಖಲಿಸುತ್ತದೆ.ಕ್ರಿ.ಶ. 1728 ಅಕ್ಟೋಬರ್ 27ರ ಬಾನುವಾರದಂದು ಹೊರಡಿಸಲಾಗಿರುವ ಶಾಸನ ಕೊಡಗನೂರು ಸೀಮೆಯ ಮಲ್ಲನಹಳ್ಳಿ ಗ್ರಾಮವನ್ನು ಮೆದಕರಿಪುರ ಎಂದು ಹೆಸರು ಬದಲಾಯಿಸಿ ತಿರುಮಲಭಟ್ಟರ ಮಗ ಶಾಮಾಚಾರ್ಯರಿಗೆ ನೀಡಿದ್ದನ್ನು ಉಲ್ಲೇಖಿಸುತ್ತದೆ.ಕ್ರಿ.ಶ. 1729 ಮೇ 22ರ ಗುರುವಾರ ಶೃಂಗೇರಿ ಶ್ರೀಶಂಕರ ಭಾರತೀ ಸ್ವಾಮಿಗಳಲ್ಲಿ

ಕ್ಷಮೆಯಾಚಿಸಿ ಬಾಗೂರುಸೀಮೆಯ ಮಾರಬಗಟ್ಟೆ ಗ್ರಾಮವನ್ನು ದಾನವಾಗಿ ನೀಡಿದ್ದನ್ನು ದಾಖಲಿಸುತ್ತದೆ. ಈ ಶಸನಗಳಲ್ಲಿನ ಉಲ್ಲೇಖಗಳನ್ನು ಗಮನಿಸಿದರೆ ಈಗಾಗಲೇ ಈ ಮಠಕ್ಕೆ ಹಿರೇಮದಕರಿನಾಯಕನ ಪೂರ್ವಿಕರು ದಾನ ಧರ್ಮಗಳನ್ನು ಕೊಟ್ಟಿದ್ದು, ಕಾರಣಾಂತರಗಳಿಂದ ನಿಂತಿದ್ದರ ಬಗ್ಗೆ ಮಾಹಿತಿ ನೀಡುತ್ತವೆ; ಜೊತೆಗೆ ಹಿರೇಮದಕರಿನಾಯಕ ತನ್ನ ಆಡಳಿತಾವಧಿಯಲ್ಲಿ ಶೃಂಗೇರಿ ಮಠಾಧೀಶರ ಕ್ಷಮೆಯಾಚಿಸಿ ದಾನನಿಷ್ಠೆಯನ್ನು ಮುಂದುವರೆಸಿದ್ದರ ಉಲ್ಲೇಖಗಳನ್ನು ಸ್ಪಷ್ಟಪಡಿಸುತ್ತವೆ.

ಕ್ರಿ.ಶ. 1747 ಆಗಸ್ಟ 14ರಂದು ದಾವಣಗೆರೆ ತಾಲ್ಲೂಕಿನ ಆನಗೋಡು ಗ್ರಾಮದಲ್ಲಿ ಹೊರಡಿಸಲಾಗಿರುವ ಶಾಸನ ಉಜ್ಜಯನಿಪೀಠದ ಸಿದ್ದಲಿಂಗದೇವರ ಸೇವೆಗೆ ಭೂಮಿ ಮತ್ತು ಆಯಗಾರರನ್ನು ನೇಮಿಸಿ ಶಾಸನವನ್ನು ಹೊರಡಿಸಲಾಗಿದೆ. ಈ ಶಾಸನ ಹಿರೇಮದಕರಿನಾಯಕನನ್ನು 'ಕಾಮಗೇತಿ ಅರಸು' ಎಂದು ದಾಖಲಿಸಿದೆ. ಈ ಶಾಸನವನ್ನು ಹೊರಡಿಸಿದ ಕೇವಲ ಏಳು ತಿಂಗಳು ಹನ್ನೊಂದು ದಿನಕ್ಕೆ ಅಂದರೆ ಕ್ರಿ.ಶ. 1748 ಮಾರ್ಚ್ 24 ರಂದು ಮಾಯಕೊಂಡಕದನ ಪ್ರಾರಂಭವಾಗಿತ್ತು. ಆದ್ದರಿಂದ ಈ ಕದನದಲ್ಲಿ ಧರ್ಮ ತನ್ನ ಕಾರ್ಯವನ್ನು ನಿರ್ವಹಿಸಿರುವ ಸಾಧ್ಯತೆಯನ್ನು ಅನುಮಾನಿಸಬಹುದು.ಮಾಯಕೊಂಡ ಕದನದಲ್ಲಿ ಹಿರೇಮದಕರಿನಾಯಕನ ವಿರುದ್ಧ ಭಾಗವಹಿಸಿದ್ದ ಬಿದನೂರು-ಕೆಳದಿ, ಹರಪನಹಳ್ಳಿ, ಸಂತೆಬೆನ್ನೂರು ಮೊದಲಾದ ಪಾಳೆಯಗಾರರು ವೀರಶೈವ ಹಾಗೂ ಮುರುಘಾಮಠದಲ್ಲಿ ನಿಷ್ಠೆಯುಳ್ಳವರಾಗಿದ್ದರು. ಕ್ರಿ.ಶ. 1726 ರಿಂದ 1748ರ ವರೆಗೆ ಈ ಪಾಳೆಯಗಾರರ ನಡುವೆ ಹಲವು ಕದನಗಳೇ ನಡೆದಿವೆ; ಒಂದುವೇಳೆ ಇವರನ್ನೆಲ್ಲ ಪೀಠಾಧ್ಯಕ್ಷರು ಒಂದೆಡೆ ಸೇರಿಸಿ ಪರಸ್ಪರರಲ್ಲಿ ಸಂಧಾನವನ್ನು ಏರ್ಪಡಿಸುವ ಪ್ರಯತ್ನ ಮಾಡಿದ್ದಿದ್ದರೆ ಕಾದಾಟಗಳೇ ನಡೆಯುತ್ತಿರಲಿಲ್ಲವೇನೋ?. ಈ ಸಂದರ್ಭಗಳು ಹಿರೇಮದಕರಿನಾಯಕನಲ್ಲಿ ಮತಾಂತರ ನೀತಿಗೆ ಕಾರಣವಾಗಿರಬೇಕು ಆಗಿದ್ದರೆ ಅದರ ಫಲಿತಾಂಶವೇ ಈ ಮಾಯಕೊಂಡ ಕದನ. ಅದೇನೇ ಇರಲಿ ಕೋಗುಂಡೆ ಘಟನೆಯನ್ನು ಒಂದು ಸಾಂದರ್ಭಿಕ ಕಾರಣವೆಂದು ಪರಿಗಳಿಸಿ ಹಿರೇಮದಕರಿನಾಯಕನ ಮತಾಂತರ ನೀತಿಯ ವಿವರವಾದ ಚರ್ಚೆಯನ್ನು ಪ್ರಸಕ್ತ ಲೇಖನದ ವ್ಯಾಪ್ತಿಗೆ ಹೊರಗಾದುದರಿಂದ ಅದನ್ನು ಇಲ್ಲಿಗೇ ನಿಲ್ಲಿಸುತ್ತೇನೆ.

ಮಾಯಕೊಂಡ ಕದನದಲ್ಲಿ ಆರ್ಕಾಟ್ ನವಾಬ ಚಂದಾಸಾಹೇಬ್, ಆದವಾನಿ ಸುಬೇದಾರ್ ಹಿಲಾಲ್‌ಖಾನ್ ಮತ್ತು ಗುತ್ತಿ ಮುರಾರಿರಾಯ ಮಿತ್ರ ಹಿರೇಮದಕರಿನಾಯಕನ ಪಕ್ಷದ ನೇತೃತ್ವವಹಿಸಿದ್ದರು. ರಾಯದುರ್ಗದ ಪಾಳೆಯಗಾರ ಪೆದ್ದ ತಿಮ್ಮಪ್ಪನಾಯಕನ ಮಗ ಕೊನೇಟಿನಾಯಕ, ಸವಣೂರಿನ ನವಾಬ ಮೊದಲ ಮಜೀದ್‌ಖಾನ್, ಹರಪನಹಳ್ಳಿ ಪಾಳೆಯಗಾರಸೋಮಶೇಖರನಾಯಕ ಮತ್ತು ಕೆಳದಿ ಇಮ್ಮಡಿ ಬಸವಪ್ಪನಾಯಕ ಎದುರು ಪಕ್ಷದ ನೇತೃತ್ವ ವಹಿಸಿದ್ದರು. ಕ್ರಿ.ಶ. 1748ರಲ್ಲಿ ಹಿರೇಮದಕರಿನಾಯಕ ತನ್ನ ರಾಜಕೀಯ ಮಿತ್ರರಾಗಿದ್ದ ಮರಾಠರೊಂದಿಗೆ ಅಣಜಿ ಬಳಿ ಹೋಗಿದ್ದಾಗ ಮಾಯಕೊಂಡ ಆಕ್ರಮಣ ಆರಂಭವಾಗಿತ್ತು. ಈ ಸಂದರ್ಭದಲ್ಲಿ ಕೋಟೆಯೊಳಗೆ ಕೆಲವು ಸೈನಿಕರು ಮಾತ್ರ ಇದ್ದರು. ಗಜಪಡೆಯ ಸೇನಾಧಿಪತಿ, ಕಾಟನಾಯಕ, ಮಗ ಭರಮಣ್ಣನಾಯಕ ಹಾಗೂ ಕಂದನಕೋವಿ ಭರಮಣ್ಣ ಇತರರು ಬಹು ಸಾಹಸದಿಂದ ಹೋರಾಡಿದ್ದರು.

ಶತ್ರುಗಳ ಆಕ್ರಮಣದ ವರ್ತಮಾನವನ್ನು ತಿಳಿದ ಹಿರೇಮದಕರಿನಾಯಕ ರಾಜಧಾನಿ ಚಿತ್ರದುರ್ಗದಿಂದ ನೀರ್ಥಡಿ ಮಾರ್ಗವಾಗಿ ಮಾಯಕೊಂಡಕ್ಕೆ ಬಂದನು. ಇವನೊಂದಿಗೆ ಆರ್ಕಾಟಿನ ನವಾಬ ಚಂದಾಸಾಹೇಬ ಮತ್ತು ಅವನ ಮಗ ರಾಜಾಸಾಹೇಬ ಇನ್ನೂರು ಕುದುರೆ ಮತ್ತು ಇನ್ನೂರು ಕಾಲಾಳು ಪಡೆಗಳೊಂದಿಗೆ ಸೇರಿಕೊಂಡನು. ಚಂದಾಸಾಹೇಬ ಡೂಪ್ಲೆಯ ಸಹಾಯ ಪಡೆದು ಮರಾಠರಿಂದ ಕ್ರಿ.ಶ. 1748ರಲ್ಲಿ ಬಿಡುಗಡೆಹೊಂದಿ ಮರಾಠರ ಸೈನಿಕ ನೆರವನ್ನು ಪಡೆದು ತನ್ನ ಸ್ನೇಹಿತ ಹಿರೇಮದಕರಿನಾಯಕನಿಗಾಗಿ ಆರು ಸಾವಿರ ಸೈನಿಕರಿರುವ ಪಡೆಯನ್ನು ರಚಿಸಿದ್ದನು. ಮರಾಠರ ರಾಜಕೀಯ ಮಿತ್ರನಾಗಿದ್ದ ಹಿರೇಮದಕರಿನಾಯಕನಿಗೆ ಬೆಂಬಲ ನೀಡಲು ಚಂದಸಾಹೇಬ್ ಮಾಯಕೊಂಡ ಯುದ್ಧದಲ್ಲಿ ಭಾಗವಹಿಸಿದ್ದನು.

ಚಂದಾಸಾಹೇಬ್ ಈ ಯುದ್ದದಲ್ಲಿ ಭಾಗವಹಿಸಲು ಪ್ರಮುಖ ಕಾರಣ ಮರಾಠರ ಸುಭೇದಾರ ಗುತ್ತಿಯ ಮುರಾರಿರಾಯ ಕ್ರಿ.ಶ. 1742ರಲ್ಲಿ ಹರಪನಹಳ್ಳಿಯ ಪಾಳೆಯಗಾರ ಸೋಮಶೇಖರನಾಯಕನ ಮೇಲೆ ಆಕ್ರಮಣಮಾಡಿ ಕೊಟ್ಟೂರು ಕದನದಲ್ಲಿ ಸೋಲನಭವಿಸಿದ್ದನು. ಮುರಾರಿರಾಯ ಸಿದ್ದೋಜಿಯ ಮಗನಾಗಿದ್ದನು, ಇವನು ಸಿದ್ದೋಜಿಮುರಾರಿ ಎಂದೂ ಕರೆಯಲ್ಪಟ್ಟಿದ್ದಾನೆ. ಈ ಸೋಲಿನ ಸೇಡಿಗಾಗಿ ಮರಾಠರು ತಮ್ಮ ವಶದಲ್ಲಿದ್ದ ಚಂದಾಸಾಬ್‌ನನ್ನು ಬಿಡುಗಡೆಗೊಳಿಸಿ ಮುರಾರಿರಾಯನ ಸಹಾಯಕ್ಕೆ ಕಳುಹಿಸಿದ್ದರು. ಅದೇ ಸಂದರ್ಭದಲ್ಲಿ ಆರ್ಕಾಟಿನಲ್ಲಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಬೇಕಿದ್ದ ಚಂದಾಸಾಹೇಬ್ ಸ್ವಾಮಿಕಾರ್ಯ ಹಾಗೂ ಸ್ವಂತಕಾರ್ಯ ಸಾಧನೆಗಾಗಿ ಮಾಯಕೊಂಡ ಕದನದಲ್ಲಿ ಭಾಗವಹಿಸಿದ್ದನು. ಅದೇ ವೇಳೆಗೆ ಮುರಾರಿರಾಯ ತನ್ನ ನೂರು ಆನೆ, ಹತ್ತುಸಾವಿರ ಕಾಲಾಳು, ಫಿರಂಗಿ, ಬಾಣ, ಭೇರಿಗಳೊಂದಿಗೆ ತಾನು ಈ ಮೊದಲು ಸೋಮಶೇಖರನಾಯಕನಿಂದ ಕೊಟ್ಟೂರು ಕದನದಲ್ಲಿ ಅನುಭವಿಸಿದ್ದ ಸೋಲಿನ ಸೇಡಿಗಾಗಿ ಈ ಕದನದಲ್ಲಿ ಭಾಗವಹಿಸಿದ್ದನು.

ಕೆಳದಿಯ ಇಮ್ಮಡಿ ಬಸವಪ್ಪನಾಯಕನ ಸೇನಾನಿ ಸಬುನೀಸ ಕೃಷ್ಣಪ್ಪ ಹಿರೇಮದಕರಿನಾಯಕನನ್ನು ಹಿಮ್ಮೆಟ್ಟಿಸಿ ಚಂದಾಸಾಹೇಬನನ್ನು ಬಂದಿಸಿದನು. ಬಂದಿತ ಚಂದಾಸಾಹೇಬ್ ತನ್ನನ್ನು ಬಿದನೂರಿಗೆ ಸಾಗಿಸುವಾಗ ತಪ್ಪಿಸಿಕೊಂಡು ತಿರುಚನಾಪಳ್ಳಿಗೆ ಹೋಗಿ ಫ್ರೆಂಚರ ಆಶ್ರಯ ಪಡೆದುಕೊಂಡನು. ಇವನ ಮಗ ರಾಜಾಸಾಹೇಬ್

(ಅಬೀದ್ ಸಾಹಿಬ್) ಹಿರೇಮದಕರಿಯ ಬೆಂಬಲವಾಗಿ ಮಾಗಡಿಕೆರೆಯ ಬಯಲಿನಲ್ಲಿ ಹೋರಾಡುತ್ತಲೇ ಮರಣಹೊಂದಿದನು. ಇವನನ್ನು ಮಾಗಡಿಯಲ್ಲಿ ಸಮಾಧಿ ಮಾಡಲಾಗಿದೆ.

ಯುದ್ಧದ ನಿರ್ಣಾಯಕಹಂತದಲ್ಲಿ ಹಿರೇಮದಕರಿನಾಯಕ ಹಾಗೂ ಸೋಮಶೇಖರನಾಯಕ ಪರಸ್ಪರ ಮುಖಾ – ಮುಖಿಯಾಗಿಪಟ್ಟದ ಆನೆಗಳ ಮೇಲೆ ಮಾಯಕೊಂಡ ಕೋಟೆಯೊಳಗೆ ಕಾದಾಡಿ ಗಾಯಗೊಂಡರು. ಸೋಮಶೇಖರನಾಯಕ ತನ್ನ 'ಹಯೋಮುಖ' ವೆಂಬ ಭರ್ಜಿಯಿಂದ ಹಿರೇಮದಕರಿನಾಯಕನಿಗೆ ಬಲವಾಗಿ ತಿವಿದು ಘಾಸಿಗೊಳಿಸಿದನು. ಸೋಮಶೇಖರನಾಯಕ ಮೂರ್ಛೆಹೋದನು ಆದರೆ ಹಿರೇಮದಕರಿನಾಯಕ ಅಲ್ಲಿಯೇ ಕುಸಿದು ಕ್ರಿ.ಶ. 1749 ಫೆಬ್ರುವರಿ 18 ರಂದು ಪ್ರಾಣಬಿಟ್ಟನು. ಹಿರೇಮದಕರಿನಾಯಕನ ಮರಣದೊಂದಿಗೆ ಮಾಯಕೊಂಡ ಕದನಕ್ಕೆ ತಾತ್ಕಾಲಿಕ ವಿರಾಮ ದೊರಕ್ಕಿತ್ತಷ್ಟೆ; ಈ ಕದನವನ್ನು ಅವನ ಮಗ ಕಸ್ತೂರಿ ರಂಗಪ್ಪ ನಾಯಕ ಕ್ರಿ.ಶ. 1749ರ ಏಪ್ರಿಲ್ ವರೆಗೂ ಮುಂದುವರೆಸಿ ಕೊನೆಗಾನಿಸಿದನು. ಹಿರೇಮದಕರಿನಾಯಕನನ್ನು ಮಾಯಕೊಂಡದಲ್ಲಿಯೇ ದಹನಮಾಡಿ ಅಸ್ಥಿಯನ್ನು ಸಮಾಧಿ ಮಾಡಲಾಯಿತು. ಕೆಲವು ಅಸ್ಥಿಗಳನ್ನು ಚಿತ್ರದುರ್ಗದಲ್ಲಿ ಭರಮಣ್ಣನಾಯಕನ ಸಮಾಧಿಯ ಬಳಿ ಸಮಾಧಿಮಾಡಲಾಗಿದೆ. ಸಂಪಿಗೆ ಸಿದ್ದೇಶ್ವರನ ದೇವಾಲಯದ ಕಳಸದ ಅಂಚಿನಲ್ಲಿ ನಿಂತು ಯುದ್ಧ ನೋಡುತ್ತಿದ್ದ 'ಬಾನಂಗಳದ ಸೂರ್ಯನೊಂದಿಗೆ ದುರ್ಗದ ಸೂರ್ಯ'ನೂ ಮುಳುಗಿ ವೀರಸ್ವರ್ಗವನ್ನು ಹೊಂದಿದನು.

ಶತ್ರುಪಡೆಗಳಿಗೆ ಚಿತ್ರದುರ್ಗದವರ ನಾಲ್ಕು ಆನೆಗಳು, ಎರಡು ಫಿರಂಗಿಗಳು, ಮಹಾರಾಜರ ಒಂದು ಶಿಲಾಭತ್ತಾರ ಮತ್ತು ಒಂದು ಗುರುದಾಕತ್ತಿ ವಶವಾದವು. ಮಾಯಕೊಂಡ ಯುದ್ಧವಾದ ಮೇಲೆ ಹರಪನಹಳ್ಳಿಯ ಪಾಳೆಯಗಾರ ಸೋಮಶೇಖರನಾಯಕನು ಒಪ್ಪಿಸಿದ ನಜರು ಹಣದಿಂದ ಕೆಳದಿಯ ಇಮ್ಮಡಿ ಬಸವಪ್ಪನಾಯಕ ಯುದ್ಧದ ಗೆಲುವಿನ ಸ್ಮರಣಾರ್ಥ ತನ್ನ ಮನೆದೇವತೆಯಾದ ಕೊಲ್ಲೂರು ಮುಕಾಂಬಿಕಾ ದೇವಿಗೆ ಕ್ರಿ.ಶ. 1749 ಫೆಬ್ರುವರಿ 18 ರಂದು ಬೆಳ್ಳಿತಟ್ಟೆಯನ್ನು ಕಾಣಿಕೆಯಾಗಿ ಅರ್ಪಿಸಿ ಹರಕೆ ತೀರಿಸಿದ್ದನು. ಇಷ್ಟಾದರೂಹರಪನಹಳ್ಳಿ ಸೋಮಶೇಖರನಾಯಕನಿಗೂ ಅವನ ಕಡೆ ಹೋರಾಡಿದ ಇತರೆ ನಾಯಕರಿಗಾಗಲೀ ಮಾಯಕೊಂಡ ದಕ್ಕಲಿಲ್ಲ.

ಇತ್ತ ಸಂಪಿಗೆ ಸಿದ್ದೇಶ್ವರ ದೇವಾಲಯದಲ್ಲಿ ಕ್ರಿ.ಶ. 1749ರಲ್ಲಿ ಪಟ್ಟಾಭಿಷಿಕ್ತನಾದ ಹಿರೇಮದಕರಿನಾಯಕನ ಮಗ ಇಮ್ಮಡಿ ಕಸ್ತೂರಿ ರಂಗಪ್ಪನಾಯಕ ತನ್ನ ತಂದೆಯ ಸೋಲು ಮತ್ತು ಸಾವಿನ ಸೇಡಿಗಾಗಿ ಯುದ್ಧವನ್ನು ಮುಂದುವರೆಸಿದನು.ಇಮ್ಮಡಿ ಕಸ್ತೂರಿ ರಂಗಪ್ಪನಾಯಕ ಸಂತೆಬೆನ್ನೂರಿನ ಮೇಲೆ ದಾಳಿಮಾಡಿದ್ದಾಗ ಹಿಲಾಲ್ ಖಾನ್ ಮತ್ತು ಮುರಾರಿರಾಯ ಲಂಚದ ಆಸೆಗೆ ಶತ್ರುಗಳ ಕಡೆಗೆ ಸೇರಿಕೊಂಡು ವಂಚಿಸಿದರು. ಕ್ರಿ.ಶ. 1749ರಲ್ಲಿ ಗುತ್ತಿಯ ಮುರಾರಿರಾಯ ಮತ್ತು ಆದವಾನಿ ನವಾಬ ಹಿಲಾಲ್‌ಖಾನ್‌ನ ನೆರವಿನಿಂದ ಯುದ್ಧವನ್ನು ಮುಂದುವರೆಸಿದನು. ಹರಪನಹಳ್ಳಿಯ ಮೇಲೆ ಆಕ್ರಮಣಮಾಡಿ ಸೋಮಶೇಖರನಾಯಕನನ್ನು ಸೋಲಿಸಿದನು. ಮಾಯಕೊಂಡ ಕೋಟೆಯನ್ನು ಕಾವಲಿನ ನಾಗಜ್ಜನಾಯಕ, ಕಾಟನಾಯಕನ ಮಗ ಭರಮಣ್ಣನಾಯಕ, ರಾಣಿವೆ ಗುರಿಕಾರರು ಒಟ್ಟಾಗಿ ಎರಡು ತಿಂಗಳುಗಳ ಕಾಲ ಹೋರಾಡಿ ಮಾಯಕೊಂಡ ಕೋಟೆಯನ್ನು ಶತ್ರುಗಳಿಂದ ರಕ್ಷಿಸಿದ್ದರು. ಇದರ ನೆನಪಿಗಾಗಿ ಇಮ್ಮಡಿ ಕಸ್ತೂರಿ ರಂಗಪ್ಪನಾಯಕನ ಆದೇಶದಂತೆ ಕಂದನಕೋವಿ ಭರಮಣ್ಣನಾಯಕ ಮಾಯಕೊಂಡದ ವೀರಹನುಮಂತ ದೇವರಿಗೆ ಶಾಸನಸಹಿತ ಗಂಟೆಯನ್ನು ಅರ್ಪಿಸಿದನು. ಇಮ್ಮಡಿ ಕಸ್ತೂರಿ ರಂಗಪ್ಪನಾಯಕ ಬುಕ್ಕಸಾಗರ ಮತ್ತು ಬೂದಿಹಾಳ್ ಕೋಟೆಗಳನ್ನು ಗೆದ್ದುಕೊಂಡನು ಇದರಿಂದ ಸಚಿದಾನಕ್ಕೆ ಮುಂದಾದ ಇಮ್ಮಡಿ ಬಸವಪ್ಪನಾಯಕ ಮಾಯಕೊಂಡವನ್ನು ಚಿತ್ರದುರ್ಗಕ್ಕೆ ಬಿಟ್ಟುಕೊಟ್ಟನು. ಸಚಿತೆಬೆನ್ನೂರನ್ನು ಬಿದನೂರಿನ ವಶದಲ್ಲಿಟ್ಟು ಅದರ ರಾಜತ್ವದ ಕಾಲುಭಾಗವನ್ನು ಹಿಲಾಲ್‌ಖಾನ್ ಮತ್ತು ಗುತ್ತಿ ಮುರಾರಿರಾಯರ ನಡುವೆ ಹಂಚಿಕೆ ಮಾಡಿದನು.









1. ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿದ್ದ ಪ್ರದೇಶಗಳು. 2. ಮಾಯಕೊಂಡ ನಕ್ಷೆ 3. ಮಾಯಕೊಂಡ ಯುದ್ಧ ನಡೆದಿದ್ದ ಕೋಟೆ ಪ್ರದೇಶ.
4. ಹಿರೇಮದಕರಿನಾಯಕರ ಸಮಾಧಿ ಸ್ಥಳ ಮಾಯಕೊಂಡ. ( ಈ ಚಿತ್ರಗಳನ್ನು ಆರ್. ಬೆರ್ರಿ ಲೆವಿಸ್ ಅವರ ಲೇಖನದಿಂದ ಎರವಲು ಪಡೆಯಲಾಗದೆ.)

## ಆಕರ ಗ್ರಂಥಗಳು:

೦೧. ಅಕ್ಷರ. ಕೆ.ವಿ., ೧೯೯೪, ರಂಗಪ್ರಪAಚ, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸದೆಹಲಿ.
೦೨. ಕಲಬುರ್ಗಿ. ಎಂ., ೨೦೦೭, ಮಾರ್ಗ, ಸಂಪುಟ-೪, ಸಪ್ನ ಬುಕ್ ಹೌಸ್, ಬೆಂಗಳೂರು.

೦೩. ಕೊಟ್ರೇಶ್. ಎಂ., ೨೦೧೦, ಕಲ್ಯಾಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೪. ಗAಗಾನಾಯಕ್. ಕೆ.ಎನ್., (ಪ್ರ.ಸಂ.), ೨೦೧೨, ಪಾಳೆಯಗಾರರ ಶಾಸನಗಳು ಸಂಪುಟ-೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೦೫. ಗಿರಿಜ. ಟಿ., ೨೦೧೯, ದಾವಣಗೆರೆ ಇದು ನಮ್ಮ ಜಿಲ್ಲೆ, ಗಿರಿಶೈಲ ಪ್ರಕಾಶನ, ದಾವಣಗೆರೆ.

೦೬. ಗೋವಿಂದಮೂರ್ತಿ ದೇಸಾಯಿ., ೧೯೯೯, ಸವಣೂರು ನವಾಬರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೦೭.ಚಿನ್ನಸ್ವಾಮಿ ಸೋಸಲೆ. ಎನ್., ೨೦೧೫, ದಲಿತ ಚರಿತ್ರೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.

೦೮. ಚಿನ್ನಸ್ವಾಮಿ ಸೋಸಲೆ. ಎನ್., ೨೦೨೧, ವಿಜಯನಗರ ಸಾಮ್ರಾಜ್ಯ ಮತ್ತು ಸಂಸ್ಥಾನಗಳ ಸಾಂಸ್ಕೃತಿಕ ಚರಿತ್ರೆ, ಪ್ರಸಾರಾಂಗ, ಹಂಪಿ.

೦೯. ದುರುಗಪ್ಪ. ಕೆ.ಎಂ., ೨೦೧೦, ವಿಜನಗರೋತ್ತರಕಾಲೀನ ಬೇಡ ಜನಾಂಗ, ವಾಲ್ಮೀಕಿ ಸಾಹಿತ್ಯಸಂಪದ, ಹರ್ತಿಕೋಟೆ.

೧೦. ನರಸಿಂಹಮೂರ್ತಿ. ಎ.ವಿ., ೧೯೯೬, ವಿಜಯನಗರದ ನಾಣ್ಯ ಸಂಪತ್ತು, ಪ್ರಸಾರಾಂಗ, ಮೈಸೂರು.

೧೧. ನರಸಿಂಹಮೂರ್ತಿ .ಎ.ವಿ., (ಪ್ರ.ಸಂ.), ೨೦೧೩, ಭಾರತೀಯ ಜನತೆಯ ಇತಿಹಾಸ ಮತ್ತುಸಂಸ್ಕೃತಿ, ಮರಾಠರ ಪಾರಮ್ಯ, ಭಾಗ-೧, ಭಾರತೀಯ ವಿದ್ಯಾಭವನ, ಬೆಂಗಳೂರು. ಪು. ೪೭೦.

೧೨. ನಂಜುAಡಸ್ವಾಮಿ. ಎ.ಎಸ್., ೨೦೧೨, ಪಾಳೆಯಗಾರರು ಮತ್ತು ಒಡೆಯರ ಇತಿಹಾಸ, ಸಮಾಜ ಪುಸ್ತಕಾಲಯ, ದಾರವಾಡ.

೧೩. ನಾಗೇಗೌಡ. ಎಚ್.ಎಲ್., ೨೦೦೭, ಪ್ರವಾಸಿ ಕಂಡ ಇಂಡಿಯಾ, ಸಂ.೮, ಐಬಿಎಚ್ ಪ್ರಕಾಶನ, ಬೆಂಗಳೂರು.

೧೪. ಪುಟ್ಟಣ್ಣ. ಎಂ.ಎಸ್., ೧೯೭೭, ಚಿತ್ರದುರ್ಗದ ಪಾಳೆಯಗಾರರು, ಮದಕರಿ ಪ್ರಕಾಶನ, ಚಿತ್ರದುರ್ಗ.

೧೫. ಭಗವಾನ್. ಕೆ.ಎಸ್., ೨೦೧೭, ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಮಹಿಮ ಪ್ರಕಾಶನ, ಮೈಸೂರು.

೧೬. ಮಂಜುನಾಥ. ಟಿ., ೨೦೦೬, ಚಿತ್ರದುರ್ಗ ಹಾಗೂ ಸುತ್ತಮುತ್ತಲಿನ ಪಾಳೆಯಗಾರರ ಸಾಂಸ್ಕೃತಿಕಇತಿಹಾಸ, (ಪಿಹೆಚ್.ಡಿ. ಪ್ರಬಂಧ), ಡಾ. ರಾಜರಾಮ ಹೆಗಡೆ, (ಮಾ), ಕುವೆಂಪು ವಿಶ್ವವಿದ್ಯಾಲಯ, ಶೋಧಗಂಗ.

೧೭. ರಹಮತ್ ತರೀಕೆರೆ., ೨೦೧೯, ರಾಜಧರ್ಮ, ಪ್ರಸಾರಾಂಗ, ಹಂಪಿ.

೧೮. ರಾಜರಾಮ ಹೆಗಡೆ., ಅಶೋಕ ಶೆಟ್ಟರ್., ೨೦೦೧, ಮಲೆಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಹಂಪಿ.

೧೯. ರಾಜಶೇಖರಪ್ಪ. ಬಿ., ೨೦೧೯, ದುರ್ಗಶೋಧನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೦. ರಾಜಶೇಖರಪ್ಪ. ಬಿ., ೨೦೧೬, ಪ್ರಾಚೀನ ಚಿತ್ರದುರ್ಗ, ಶ್ರೀಮುರುಘರಾಜೇಂದ್ರ ಗ್ರಂಥಮಾಲೆ,ಚಿತ್ರದುರ್ಗ.

೨೧. ಲಕ್ಷ್ಮಣ್ ತೆಲಗಾವಿ., ೨೦೧೦, ದೊಡ್ಡೇರಿ ಕದನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಲಕ್ಷ್ಮಣ್ ತೆಲಗಾವಿ., (ಸಂ), ೨೦೦೮, ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ, ವಾಲ್ಮೀಕಿಸಾಹಿತ್ಯ ಸಂಪದ, ಹರ್ತಿಕೋಟೆ.

೨೩. ಲಕ್ಷ್ಮಣ್ ತೆಲಗಾವಿ., (ಸಂ), ೧೯೯೫, ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ.

೨೪. ಲಕ್ಷ್ಮಣ್ ತೆಲಗಾವಿ., (ಸಂ), ೧೯೭೬, ಚಂದ್ರವಳ್ಳಿ, ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ.

೨೫. ಶ್ಯಾಮಲ. ಸಿ.ಆರ್., ೨೦೦೮, ಪೂರ್ವ ಕರ್ನಾಟಕದ ಪಾಳೆಯಗಾರರು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೬. ಷೇಕ್ ಅಲಿ. ಬಿ., ೨೦೧೮, ಕರ್ನಾಟಕ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ಸದಾಶಿವಪ್ಪ. ಕುಂ.ಬಾ., ೨೦೦೬, ಹರಪನಹಳ್ಳಿ ಪಾಳೇಗಾರರ ಇತಿಹಾಸ ದರ್ಶನ, ಕನ್ನಡ ಸಾಹಿತ್ಯಪರಿಷತ್, ಬೆಂಗಳೂರು.

೨೮. ಸಾಲೆತೋರೆ. ಬಿ.ಎ., ೨೦೧೯, ಕನ್ನಡ ನಾಡಿನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೯. ಸುಧಾಮಣಿ. ಬಿ.ವಿ., ೨೦೧೧, ಕೆಳಲೆ ರಾಜವಂಶ: ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸ –ಒಂದು ಅವಲೋಕನ,ಸಂಸ್ಕೃತಿ ಇಲಾಖೆ, ಭಾರತ ಸರ್ಕಾರ, ಮೈಸೂರು.

೩೦. ಸುಮತೀಂದ್ರ ನಾಡಿಗ್., ೨೦೦೮, ಸಂತೆಬೆನ್ನೂರು ನಾಯಕರು, ಕರ್ನಾಟಕ ರಾಜ್ಯ ಪತ್ರಗಾರ ನಿರ್ದೇಶನಾಲಯ, ಬೆಂಗಳೂರು.

೩೧. ಹರ್ತಿಕೋಟೆ ವೀರೇಂದ್ರಸಿAಹ., ೨೦೨೦, ವಾಲ್ಮೀಕಿ ವಿಜಯ, ಆದಿಕವಿ ಮಹರ್ಷಿ ವಾಲ್ಮೀಕಿ ಪ್ರಕಾಶನ, ರಾಜನಹಳ್ಳಿ.

೩೨. ಹುಲ್ಲೂರು ಶ್ರೀನಿವಾಸ ಜೋಯ್ಸರು., ೨೦೦೯, ಚಿತ್ರದುರ್ಗದ ಬಖೈರು, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು.

೩೩. ಸಂಯುಕ್ತಾ ಪುಲಿಗಲ್., ೨೦೧೯, ರೆಬಲ್ ಸುಲ್ತಾನರು, ಸ್ವ್ಯಾನ್ ಪ್ರಿಂಟರ್ಸ್, ಬೆಂಗಳೂರು.